


ಕೊಲೆಗಾರ ಯಾವಾಗಲೂ ಏನಾದರೊಂದು ಸುಳಿವನ್ನು ಬಿಟ್ಟು ಹೋಗಿಯೇ ಇರುತ್ತಾನೆಂಬುದು ಅಪರಾಧಶಾಸ್ತ್ರದಲ್ಲಿ ಪ್ರಚಲಿತವಿರುವ ಒಂದು ಸಿದ್ಧಾಂತ. ಹೆಚ್ಚಿನ ಕೊಲೆ ಪ್ರಕರಣಗಳಲ್ಲಿ ರೋಚಕತೆ ಕಡಿಮೆಯಿದ್ದು, ಕೊಲೆಗಾರ ಯಾರೆಂಬುದನ್ನು ಪೊಲೀಸರು ಸುಲಭವಾಗಿ ಊಹಿಸುತ್ತಾರೆ. ಇದಕ್ಕೆ ಕಾರಣ ಕೊಲೆಗೆ ಇರುವ ಮೋಟಿವ್. ಅದು ಪತ್ತೆಯಾದರೆ ಹೆಚ್ಚು ಕಮ್ಮಿ ಕೊಲೆಗಾರ ಪತ್ತೆಯಾದ ಹಾಗೆಯೇ. ಹಾಗಾಗಿ ಅಡ್ಡಂಡ ಕರಮಚಂದ ಬಗೆಹರಿಸಿದ ಕೊಲೆ ಪ್ರಕರಣಗಳನ್ನು ನಾನು ಹೆಚ್ಚಾಗಿ ದಾಖಲಿಸಿಲ್ಲ.

ಆದರೆ ಆತ ಬಗೆಹರಿಸಿದ ರೋಚಕ ಕೊಲೆ ಪ್ರಕರಣವೊಂದನ್ನು ನಾನೀಗ ಯಾವುದೇ ಅಡೆತಡೆಯಿಲ್ಲದೆ ಹೇಳಬಹುದಾಗಿದೆ. ಯಾಕೆಂದರೆ ಇತ್ತೀಚೆಗಷ್ಟೇ ಆ ಪ್ರಕರಣದ ತೀರ್ಪು ಕೋರ್ಟಿನಿಂದ ಹೊರಬಿದ್ದಿದ್ದು ಆಪಾದಿತನ ಮೇಲಿನ ಆರೋಪವು ಸಾಬೀತಾಗಿದ್ದರಿಂದ ಅದು ವಿಚಾರಣಾಧೀನ ಪ್ರಕರಣವಾಗಿ ಈಗ ಉಳಿದಿಲ್ಲ.

ಜುಲೈ ತಿಂಗಳ ಒಂದು ದಿನ. ಅಂದು ಭಾನುವಾರ. ನಾವು ನಮ್ಮ ಮನೆಯಲ್ಲೇ ಇದ್ದೆವು. ಅದೇ ನಮ್ಮ ಕಚೇರಿ ಕೂಡಾ. ನಾನು ಮಧ್ಯಾಹ್ನದ ನಿದ್ದೆಯ ಜೊಂಪಿನಲ್ಲಿದ್ದೆ. ಆಗ ಕರಮಚಂದನ ಚರವಾಣಿ ರಿಂಗಣಿಸಿದ್ದು, ಆತ ಕರೆ ಸ್ವೀಕರಿಸಿ ಮಾತಾಡಿದ್ದು ಅರೆಬರೆಯಾಗಿ ಕೇಳಿಸಿಕೊಂಡೆ. ಮಂಪರಿನಲ್ಲಿ ಯಾವುದೂ ಸ್ಪಷ್ಟವಾಗಿರಲಿಲ್ಲ.

"ಬಿದ್ದಪ್ಪ, ನೀನು ನಿದ್ರೆ ಮುಂದುವರೆಸುತ್ತೀಯಾ ಅಥವಾ ನನ್ನೊಂದಿಗೆ ಬರುವ ಉತ್ಸಾಹವಿದೆಯೆ?" ಕರಮಚಂದನ ಪ್ರಶ್ನೆ ನನ್ನನ್ನು ಜಾಗ್ರತಾವಸ್ಥೆಗೆ ಮರಳಿ ತಂದಿತು. ವಿರಾಜಪೇಟೆಯ ನಗರ ಠಾಣಾಧಿಕಾರಿ ವೆಲೆಂಟೈನ್ ಡಿಸೋಜ ಕರೆ ಮಾಡಿದ್ದಾನೆ, ಕಲಿಯಂಡ ಸೋಮಯ್ಯ ಕೊಲೆಯಾಗಿದ್ದಾನಂತೆ ಅಂತ ಕರಮಚಂದ ವಿವರ ನೀಡಿದ. ನಾನು ಲಗುಬಗೆಯಿಂದ ಎದ್ದು ಕೆಲ ಕ್ಷಣಗಳಲ್ಲಿ ಹೊರಡಲು ಸಿದ್ಧನಾದೆ.

ಕಲಿಯಂಡ ಸೋಮಯ್ಯ ವಿರಾಜಪೇಟೆಯ ಪ್ರಸಿದ್ಧ ಕ್ರಿಮಿನಲ್ ವಕೀಲ. ಆತ ಇತ್ತೀಚೆಗಷ್ಟೇ ವಿರಾಜಪೇಟೆಯ ಹೊಸ ಹೆಗ್ಗುರುತಾದ ಕೂರ್ಗ್ ಹೈಟ್ಸ್ ಬಹುಮಹಡಿ ಸಂಕೀರ್ಣಕ್ಕೆ ತನ್ನ ಕಚೇರಿಯನ್ನು ಬದಲಾಯಿಸಿದ್ದ. ತುಸು ಕೋಪಿಷ್ಠನಾದ ಆತ ಸಮಯ ಪಾಲನೆಯಲ್ಲಿ ಕಟ್ಟುನಿಟ್ಟು ಎಂಬುದು ಎಲ್ಲರಿಗೂ ತಿಳಿದ ವಿಚಾರ. ಆತ ತನ್ನ ಕಚೇರಿಯಲ್ಲೇ ಕೊಲೆಯಾಗಿದ್ದಾನೆ ಅಂತ ಹಾದಿಯಲ್ಲಿ ಕರಮಚಂದ ತಿಳಿಸಿದ.

ಕೊಲೆಯ ಸುದ್ದಿ ಕೇಳಿ ಅಲ್ಲಿ ಸಾಕಷ್ಟು ಜನ ಜಮಾಯಿಸಿದ್ದರು. ಪೇದೆಯೊಬ್ಬ ನಮ್ಮನ್ನು ಮೊದಲ ಮಹಡಿಗೆ ಕರೆದೊಯ್ದ. ಒಂದೂವರೆಯಾದರೂ ಸೋಮಯ್ಯ ಕಚೇರಿಯಿಂದ ಹೊರಬರದಿದ್ದುದನ್ನು ಕಂಡು ಸೆಕ್ಯುರಿಟಿಯಾಗಿದ್ದ ಮಾದಯ್ಯ, ವಿಚಾರಿಸಲು ಬಂದವನು ಹೆಣ ಕಂಡು ಪೊಲೀಸರಿಗೆ ತಿಳಿಸಿದನಂತೆ ಎಂದು ಪೇದೆ ಮಾಹಿತಿ ನೀಡಿದ. ಶ್ರೀಮಂತ ವಕೀಲನದ್ದು ಐಷಾರಾಮಿ ಕಚೇರಿ. ದುಬಾರಿ ಶುಲ್ಕ ವಸೂಲು ಮಾಡುತ್ತಿದ್ದ ಸೋಮಯ್ಯನಿಗೆ ಇದ್ದುದು ಶ್ರೀಮಂತ ಕಕ್ಷಿಗಾರರೇ.

ಕಚೇರಿ ಪ್ರವೇಶಿಸಿದೊಡನೆ ಸಂದರ್ಶಕರ ಕೊಠಡಿ. ಅಲ್ಲಿ ಢಾಳಾಗಿ ಕಾಣುತ್ತಿದ್ದುದು ಗೋಡೆಯ ಮೇಲಿರುವ ದೊಡ್ಡದಾದ ಹಳೆಯ ಫೇವರ್ ಲೂಬಾ ಗಡಿಯಾರ.